ಜೊತೆಗೆ ಉತ್ಕಟವಾದ ಸಂಬಂಧ. ದರ್ಶನ ಅಂದರ ಇದೇ. ಅದಕ್ಕ ಹಾಯಕುದೊಳಗ ಕನಿಷ್ಠ ಪಕ್ಷ ಒಂದು ಸಿಂಬಲಾದರೂ ನೇಚರಿಗೆ ಸಂಬಂಧಿಸಿದ್ದು ಇರ್ತದ. ಒಂದು ಎಲಿ ನೀರು ಗಿಡ ಪ್ರಾಣಿ ಪಕ್ಷಿ ಯಾವುದಾದರೂ ಇರ್ತದ.

◆ ನಿಮಗೆ ಪ್ರಿಯವಾದ ಲೇಖಕರು ಯಾರು?

ನಿಜವಾಗಿ ಹೇಳಬೇಕಂದ್ರ, ನಾನು ಬಹಳ ಸಾಹಿತ್ಯ ಓದಿಕೊಂಡಿಲ್ಲ. ಕ್ಯಾಜುವಲ್ಲಾಗಿ ಕಾದಂಬರಿ ಅಂಥವು ಇಂಥವು, ಆ ಕಾವ್ಯ ಈ ಕಾವ್ಯ, ಓದಿಕೊಳ್ಳೋಕೆ ಶುರುಮಾಡಿದೆ. ಕನ್ನಡದಲ್ಲಿ ಬರೀಬೇಕು ಅಂದಾಗ ಕನ್ನಡ ಓದಬೇಕು ಅಂತಹೇಳಿ ಹೊರತು, ಅದು ನನಗ ಬಹಳ ಅನಿವಾರ್ಯ ಅಂತ ಅನಿಸಲಿಲ್ಲ. ಭಾಷೆ ದೃಷ್ಟಿಲಿಂದ, ನನಗ ಕುವೆಂಪು ಗದ್ಯ ಬಹಳ ಹಿಡಿಸಿತು. ಗದ್ಯದ ಗಡಸುತನ ಅಂತಂದರ, ಅದಕ್ಕೊಂದು ಕ್ಲಾಸಿಕಲ್ ಸ್ಟೇಟಸ್ ಬರಬೇಕು ಅಂತಂದರ ಅವರ ಗದ್ಯ. ಬಹಳ ಕ್ಲಿಯರ್ ಅದ. ತಿಳೀಲಿಲ್ಲ ಅಂದರೂ ಪರವಾಗಿಲ್ಲ, ಸುಮ್ಮನೆ ಓದಿಕೊಂಡು ಹೋದರೂನೂ ಮಾಂತ್ರಿಕ ಶಕ್ತಿ ಭಾಷೆಯೊಳಗಿರತದ. ಕಾವ್ಯದಲ್ಲಿ ಮಾತಿನಲ್ಲಿ ಅದೇ ಮಾಂತ್ರಿಕ ಶಕ್ತಿ ಅಂತಂದರೆ, ಬೇಂದ್ರೆಯವರದು. ನಮ್ಮಲ್ಲಿ ಅಂಥ ಮಾಂತ್ರಿಕ ಶಕ್ತಿ ಇದ್ದಂಥ ಒಬ್ಬರೇ ಒಬ್ಬರು ಅವರು. ಅಲ್ಲಮಪ್ರಭುವಿನ ಮಾಂತ್ರಿಕ ಶಕ್ತಿ ಬೇಂದ್ರೆಯವರಲ್ಲಿ ಅದ ಅಂತ ನಾವು ಯಾಕ ಹುಡುಕತೀವಿ? ಭಾಷೆಯ ಚಮತ್ಕಾರ ಮತ್ತು ಅದರಿಂದಾಗುವಂಥ ಎಫೆಕ್ಟ್ ಅವರಲ್ಲದ. ಕುವೆಂಪು ಅವರಲ್ಲಿ ಜ್ಞಾನ–ಬುದ್ಧಿ ಹೆಚ್ಚು ಡಾಮಿನೇಟ್ ಮಾಡತದ. ಇಂಟಲೆಕ್ಟ್ ಡಾಮಿನೇಟ್ ಮಾಡಿದರ ಕಾವ್ಯ ಹುಟ್ಟಂಗಿಲ್ಲ. ಅವರಲ್ಲಿ ಸರಳತೆ ಅದ. ಆದರೆ ಸರಳತೆ ಜತೆಗೆ ಮುಗ್ಧತೇನೂ ಇರಬೇಕು. ವಿತ್ ದಟ್ ಇನ್ನೊಸೆನ್ಸ್ ನೀವು ತಪ್ಪು ಮಾಡಿದರೂ ದಟ್ ಬಿಕಮ್ಸ್ ಪೊಯೆಟ್ರಿ. ಕಾವ್ಯ ಆಗೋದೇನೇ ಇನೋಸೆನ್ಸ್‌ನಿಂದ. ಬುದ್ಧಿವಂತರಿಂದ ಸಾಧ್ಯ ಇಲ್ಲ.

◆ 'ಶ್ರೀ ರಾಮಾಯಣ ದರ್ಶನಂ'?

ಅದರೊಳಗ ಇಂಟಲಿಜೆಂಟ್ ಇಂಟರ್‌ಪ್ರಿಟೇಶನ್ ಅದ. ಸಮ್‌ತಿಂಗ್ ನ್ಯೂ ಅದು. ಕನ್ನಡದೊಳಗ ಅದ್ಭುತವಾದಂಥ ಕೃತಿ. ಆದರೆ 'ವಾಲ್ಮೀಕಿ ರಾಮಾಯಣ'ದ ಸರಿಸಮಾನ ಯಾವ ರಾಮಾಯಣಾನೂ ಬರಲಿಕ್ಕೆ ಸಾಧ್ಯ ಇಲ್ಲ. ಆದರ ಕುವೆಂಪು ನಾವೆಲ್ಸ್‌ನೊಳಗಿನ ಗದ್ಯದಲ್ಲಿ ಥ್ರಿಲ್ ಅದ. ಇಡಿಯಾಗಿ ಒಂದು ಜೀವಂತ ಮಾಡಿಕೊಡುವಂಥ ಶಕ್ತಿ ಅದೆಯಲ್ಲ, ಅದು ಬಹಳಷ್ಟು ಗದ್ಯ ರೈಟರ್ಸ್‌ನಲ್ಲಿ ಬಂದಿಲ್ಲ. ಕುವೆಂಪು ಅವರ ಈ ಲಲಿತಗದ್ಯ ಏನು ನೋಡತೀವಿ ಕಾದಂಬರಿಗಳಲ್ಲಿ, ಅದು ತನ್ನ ಜೀವಂತಿಕೆ ತಗೊಂಡು ಹೊಂಟದ. ಆ ನೆಲದ ಸುಗಂಧ, ಆ ಭಾಷೆಯ ಸತ್ವ ಎರಡೂ ಕೂಡಿದ ಗದ್ಯ ಅಲ್ಲದ ಅವರ ಪ್ರಯೋಗದಲ್ಲಿ ಸಂಸ್ಕೃತನಿಷ್ಠ ಭಾಷೆ ಇದ್ದರೂ, ಜಾನಪದನಿಷ್ಠ ಪ್ರಜ್ಞೆ ಇದ್ದರೂ, ಎರಡಕ್ಕೂ ಬ್ಲೆಂಡ್ ಮಾಡೊ ಕೆಪಾಸಿಟಿ ಅದ.

◆ ನೀವು 'ಲಂಕೇಶ್ ಪತ್ರಿಕೆ'ಯಲ್ಲಿ ಬರೀತಿದ್ರಿ. ಅವರ ಜತೆ ಸಂಬಂಧ ಹೇಗಿತ್ತು?

ಭಾಳ ಬ್ರಿಲಿಯಂಟ್. ಅಷ್ಟೇ ಇಂಪಾರ್ಶಿಯಲ್ ಆಗಿ ಬಿಹೇವ್ ಮಾಡ್ತಾ ಇದ್ದಂಥ ವ್ಯಕ್ತಿ. ಜಾತಿ ಮತ ಯಾವುದೂ ಇದ್ದಂಗಿಲ್ಲ. ಅವರ ಕಾವ್ಯಕ್ಕಿಂತ ಗದ್ಯ ನನಗ ಬಹಳ ಹಿಡಿಸ್ತದ. ಅವರ ಗದ್ಯದೊಳಗಿನ ಕಾವ್ಯಾತ್ಮಕತೆ ಏನದ, ಅದು ಕಾವ್ಯದೊಳಗ ಇಲ್ಲ.

◆ ನೀವು ಪೇಂಟಿಂಗ್ ಮಾಡ್ತೀರಿ ಅನ್ನೋದು ಬಹಳ ಜನಕ್ಕೆ ಗೊತ್ತಿಲ್ಲ. ನಿಮ್ಮದು ಯಾವ ಪಂಥ?

ನನ್ನದು ಅಮೂರ್ತ ಚಿತ್ರಕಲೆ. ಈ ಚಿತ್ರಕಲೆಯ ಗುಣಲಕ್ಷಣ ಏನಂದರೆ ಅಲ್ಲಿ ಸ್ಪೇಸ್, ಡೆಪ್ತ್,